

ಡಾ. ಡಿ. ರಂಗಸ್ವಾಮಿ

ಸಹಾಯಕ ಕುಲಸಚಿವರು (ಆಡಳಿತ)

ಡಾ. ಡಿ. ರಂಗಸ್ವಾಮಿ, ಇವರು 2000 ಇಸವಿಯಲ್ಲಿ ಬಿ. ಎ. ಪದವಿಯನ್ನು ಜೆ.ಎಸ್.ಎಸ್. ಕಾಲೇಜು ನಂಜನಗೂಡಿನಿಂದಲೂ, 2001 ರಲ್ಲಿ ಎಲ್‌ಎಲ್.ಬಿ. ಪದವಿಯನ್ನು ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರಿನಿಂದಲೂ 2007 ರಲ್ಲಿ ಎಲ್‌ಎಲ್.ಎಮ್. ಹಾಗೂ 2013 ರಲ್ಲಿ ಪಿಹೆಚ್.ಡಿ. ಪದವಿಯನ್ನು ಕಾನೂನು ಮತ್ತು ಸಂಶೋಧನಾ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರಿನಿಂದಲೂ ಪಡೆದಿರುತ್ತಾರೆ. ತಮ್ಮ ಸ್ನಾತಕೊತ್ತರ ಪದವಿಯ ನಂತರ ಶಾರದಾ ವಿಲಾಸ ಕಾನೂನು ಕಾಲೇಜು, ಮೈಸೂರು ಇಲ್ಲಿ 2007 ರಿಂದ 2009 ರವರೆಗೆ ಕಾನೂನು ಉಪನ್ಯಾಸಕರಾಗಿ ಕಾರ್ಯವನ್ನು ನಿರ್ವಹಿಸಿರುತ್ತಾರೆ. 2009ರ ಸೆಪ್ಟೆಂಬರ್‌ನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸಹಾಯಕ ಪ್ರಾಧ್ಯಾಪಕರಾಗಿ ಆಯ್ಕೆಯಾಗಿ ಜುಲೈ 2013 ರವರೆಗೆ ಸರ್ಕಾರಿ ಕಾನೂನು ಕಾಲೇಜು ರಾಮನಗರ ಇಲ್ಲಿ ಸಹಾಯಕ ಕಾನೂನು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ಜುಲೈ 2013 ರಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಸಹಾಯಕ ಕಾನೂನು ಪ್ರಾಧ್ಯಾಪಕರಾಗಿ ಸೇವೆಗೆ ಸೇರಿರುತ್ತಾರೆ. ಸಂವಿಧಾನಾತ್ಮಕ ಕಾನೂನು, ಮಾನವ ಹಕ್ಕುಗಳ ಕಾನೂನು, ಮಹಿಳೆ ಮತ್ತು ಕಾನೂನು, ಭ್ರಷ್ಟಾಚಾರ ನಿಯಂತ್ರಣ ಕಾನೂನು, ಕಾನೂನು ಮತ್ತು ನ್ಯಾಯ, ವೃತ್ತಿ ಸಂಹಿತೆ ಮತ್ತು ಸಾರ್ವಜನಿಕ ಅಂತರಾಷ್ಟ್ರೀಯ ಕಾನೂನುಗಳಲ್ಲಿ ವಿಶೇಷ ಆಸಕ್ತಿ ಹೊಂದಿದವರಾಗಿರುತ್ತಾರೆ. ದಿನಾಂಕ 7 ಮತ್ತು 8 ನೇ ಅಕ್ಟೋಬರ್ 2018 ರಲ್ಲಿ ಶ್ರೀಲಂಕಾದ ಕೋಲಂಬೊ ನಗರದ ಜಯವರ್ಧನಪುರ ವಿಶ್ವವಿದ್ಯಾಲಯ ಆಯೋಜಿಸಿದ್ದ "ಸುಸ್ಥಿರ ಅಭಿವೃದ್ಧಿ ಮತ್ತು ಸುಆಡಳಿತ" ಅಂತರಾಷ್ಟ್ರೀಯ ಸಮ್ಮೇಳನದಲ್ಲಿ, "ನ್ಯಾಯಾಂಗ ಹೊಣೆಗಾರಿಕೆ: ಭಾರತೀಯ ನ್ಯಾಯ ಶಾಸ್ತ್ರದ ಅಂತ್ಯ ಕಾಣದ ವಸ್ತು ವಿಷಯ" ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಿರುತ್ತಾರೆ.

ಭಾರತೀಯ ಸಾಮಾಜಿಕ ಸಂಶೋಧನಾ ಸಂಸ್ಥೆ ನವದೆಹಲಿ ಇವರ ಧನ ಸಹಾಯದಲ್ಲಿ "ಸಂತ್ರಸ್ಥ ಪರಿಹಾರ ಯೋಜನೆ: ಕರ್ನಾಟಕದಲ್ಲಿ ಇದರ ಜಾರಿಯ ಟೀಕಾತ್ಮಕ ಅಧ್ಯಯನ" ಎಂಬ ಸಂಶೋಧನಾ ಪ್ರಾಜೆಕ್ಟನ್ನು ಪೂರ್ಣಗೊಳಿಸಿರುತ್ತಾರೆ. ಸುಮಾರು 30 ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದು, ಸುಮಾರು 40ಕ್ಕೂ ಅಧಿಕ ವಿವಿಧ ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಪ್ರಾದೇಶಿಕ ಸಮ್ಮೇಳನ/ಕಾರ್ಯಾಗಾರ/ಕಮ್ಮಟಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿರುತ್ತಾರೆ.

ಬೋಧನಾ ಕಾರ್ಯಬಾರದ ಜೊತೆಗೆ ಸಹಾಯಕ ಕುಲಸಚಿವರು (ಆಡಳಿತ), ಸಂಯೋಜಕರು, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಘಟಕ, ನಿಲಯಪಾಲಕರು, ಬಾಲಕರ ವಸತಿ ನಿಲಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಇವುಗಳ ಪ್ರಭಾರವನ್ನು ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದಾರೆ.